

# ಕರಡಿಮರಿಯು ಕಂಬಳಿಮೂಟೆಯು

## ಕರಡಿ ಮರಿಯೂ ಕಂಬಳಿ ಮೂಟೆಯೂ

ಗಿಳಿಯೂರು ಎಂಬ ಸುಂದರವಾದ ಒಂದು ಚಿಕ್ಕ ಗ್ರಾಮವಿತ್ತು. ಅದರಿಂದ ಸ್ವಲ್ಪದೂರದಲ್ಲಿ ದಟ್ಟವಾದ ಕಾಡಿತ್ತು. ಆ ಬೆಟ್ಟದಿಂದ ಒಂದು ಹೊಳೆ ಹರಿಯುತ್ತಿತ್ತು ಅದು ಗ್ರಾಮದೊಳಗೆ ಹಾದುಹೋಗುತ್ತಿತ್ತು ಅದರಲ್ಲಿ ಯಾವಾಗಲೂ ಜುಳು ಜುಳು ಎಂದು ಹರಿಯುವ ನೀರಿನ ಶಬ್ಧ ಕಿವಿಗೂ ಮನಸ್ಸಿಗೂ ಇಂಪಾಗಿರಿತ್ತಿತ್ತು ಅಲ್ಲಿ ನೀರಿಗೆ ಬರವೇ ಇಲ್ಲದ್ದರಿಂದ ಅಲ್ಲಿದ್ದ ಹೊಲ ಗದ್ದೆಗಳು ಬೆಟ್ಟ ಗುಡ್ಡಗಳು ಬಹು ಅಚ್ಚ ಹಸಿರಿನಿಂದ ಕೂಡಿದ್ದವು.

ಒಂದು ದಿನ ರಾತ್ರಿಯಲ್ಲಿ ಇದ್ದಕ್ಕಿದಂತೆ ಒಂದು ದೊಡ್ಡ ಮಳೆ ಸುರಿಯುತ್ತಿತ್ತು ಆ ಮಳೆ ಎಡೆಬಿಡದೆ ಕೆಲವು ದಿನಗಳು ಸುರಿದದ್ದರಿಂದ ಅಕ್ಕ ಪಕ್ಕದಲ್ಲಿನ ಕೆರೆ ತೊರೆ ಏರಿಗಳೆಲ್ಲವೂ ತುಂಬಿ ಹರಿಯಲು ಪ್ರಾರಂಭಿಸಿದವು ಅದು ಆ ನದಿಗೆ ಬಂದು ಸೇರಿತು ಇದರಿಂದ ಹೊಳೆಯಲ್ಲಿ ನೀರು ಹೆಚ್ಚಾಗಿ ಅಕ್ಕ ಪಕ್ಕದ ಗ್ರಾಮದೊಳಗೂ ಪಟ್ಟಣದೊಳಗೂ ನುಗ್ಗಿತು ಈ ಮಳೆಗೆ ಸಿಕ್ಕಿ ಕೆಲವರು ಸತ್ತು ಹೋದರೂ ಮಳೆ ಕಡಿಮೆಯಾದರೂ ನದಿಯಲ್ಲಿ ನೀರು ಕಡಿಮೆಯಾಗಲಿಲ್ಲ.

ಕೆಲವರು ನದಿಯ ಘೋರತೆಯನ್ನು ನೋಡಿ ಬಹಳ ದಿಗಿಲು ಪಟ್ಟರು ಕೆಲವರು ಕೈಕಟ್ಟಿ ಅದನ್ನು ಭಯದಿಂದ ನೋಡುತ್ತಿದ್ದರು ಇನ್ನೂ ಕೆಲವರು ಹೊಳೆಯ ಮೇಲೆ ಕೊಚ್ಚಿ ಬರುತ್ತಿರುವ ವಸ್ತುಗಳ ಮೇಲೆ ಕಣ್ಣು ಹಾಕುತ್ತಿದ್ದರು, ಮಾತ್ರವಲ್ಲದೆ ದೂರದಿಂದಲೆ ತೆಗೆಯಲು ಪ್ರಯತ್ನಿಸುತ್ತಿದ್ದರು.

ಇಂತಹ ಒಂದು ಸನ್ನಿವೇಶದಲ್ಲಿ ಸ್ವಲ್ಪ ದೂರದಲ್ಲಿ ಬಹು ಸುಂದರವಾದ ಕಂಬಳಿ ಮೂಟೆಯೊಂದು ತೇಲುತ್ತಾ ಬರುತ್ತಿರುವುದನ್ನು ಯುವಕನ್ನೊಬ್ಬನು ಕಂಡನು ಅದರೊಳಗೆ ಹೇಗೂ ಬೆಲೆಬಾಳುವ ವಸ್ತು ಇರುತ್ತದೆ ಅದನ್ನು ಹೇಗಾದರೂ ತೆಗೆದುಕೊಳ್ಳ ಬೇಕೆಂದು ಯೋಚಿಸಿ ಆ ಕಂಬಳಿ ಮೂಟೆಯೂ ತೇಲುತ್ತಾ ಮುಳುಗುತ್ತಾ ಸ್ವಲ್ಪ ಸ್ವಲ್ಪವಾಗಿ ದಡಕ್ಕೆ ಬರುವುದನ್ನು ಕಂಡನು ಅದರಲ್ಲಿರುವ ವಸ್ತುಗಳನ್ನು ಮಾರಿದರೆ ಹೆಚ್ಚು ಬೆಲೆಗೆ ಹೋಗುತ್ತದೆ ಎಂದು ಅದರ ಮೇಲೆ ಬಹು ಆಸೆಯಿಟ್ಟು ದಡಕ್ಕೆ ಬಂದ ಆ ಕಂಬಳಿ ಮೂಟೆಯನ್ನು ಹಿಡಿಯಲು ನೆನೆಸಿ ಕೊನೆಗೆ ಹಿಡಿದು ಮೇಲಕ್ಕೆಳೆಯಲು ಪ್ರಯತ್ನಿಸಿದನು. ಆದರೂ ಕೊಚ್ಚಿ ಹೋಗುತ್ತಿರುವ ನದಿಯ ನೀರಿನಲ್ಲಿ ಆತನು ತಕ್ಷಣವೇ ತೆಗೆಯಲು ಸಾಧ್ಯವಾಗಲಿಲ್ಲ ಆದರೆ ಅದನ್ನು ಬಿಟ್ಟು ಬಿಡುವುದಕ್ಕೂ ಅವನಿಗೆ ಮನಸ್ಸಿರಲಿಲ್ಲ ಇದನ್ನು ಕಂಡ ಅವನ ಸ್ನೇಹಿತರು "ಲೋ ಬೇಡ ಬಿಟ್ಟು ಬಿಡು ನೀನು ನದಿಯ ನೀರಿಗೆ ಸಿಕ್ಕಿಕೊಳ್ಳ ಬೇಡ" ಎಂದು ಕೂಗಿಕೊಂಡರು.

"ಅಯ್ಯೋ ಪಾಪ" ಅವನಿಗೆ ಆ ಕಂಬಳಿ ಮೂಟೆಯನ್ನು ಬಿಟ್ಟು ಬರಲು ಸಾಧ್ಯವಾಗಲಿಲ್ಲ ಅವನು ಎಷ್ಟೆಷ್ಟೋ ಪ್ರಯತ್ನಿಸಿದರು ಅವನಿಗೆ ಸಾಧ್ಯವಾಗಲೇ ಇಲ್ಲ. ಯಾಕೆ? ಅದು ಹೊಳೆಯ ನೀರಿನಲ್ಲಿ ಕೊಚ್ಚಿ ಬಂದ ಕಂಬಳಿ ಮೂಟೆಯಲ್ಲ ಅದು ಒಂದು ದೊಡ್ಡ ಕರಡಿ ಕಾಡಿನ ಒಂದು ಕ್ರೂರ ಪ್ರಾಣಿ ಅದು ಆ ಯುವಕನನ್ನು ಬಲವಾಗಿ ಹಿಡಿದುಕೊಂಡಿತು.

ಅನಂತರ ಅವನು ಆ ವಸ್ತು ನನಗೆ ಬೇಡವೆಂದು ನೆನಸಿದರೂ ಕೂಡ ಅವನಿಗೆ ಅದರಿಂದ ಮೇಲೆ ಬರಲು ಆಗಲಿಲ್ಲ ಅದನ್ನು ಬಿಟ್ಟು ನಾವು ತಪ್ಪಿಸಿಕೊಳ್ಳೋಣ ಎಂದು ಯೋಚಿಸಿದರೂ ಆ ಯುವಕನನ್ನು ಆ ಕರಡಿಯು ಬಿಡಲಿಲ್ಲ. ಈ ಕಡೆ ಹೊಳೆಯಲ್ಲಿ ಅವನಿಗಾಗಿ ಸಹಾಯ ಮಾಡಲು ಯಾರೂ ಮುಂಬರಲಿಲ್ಲ "ನನ್ನನ್ನು ಕಾಪಾಡಿ ನನ್ನನ್ನು ಕಾಪಾಡಿ" ಎಂದು ಬಲವಾಗಿ ಅರಚಿಕೊಂಡನು ಆದರೆ ಅದು ಪ್ರಯೋಜನವಾಗಲಿಲ್ಲ ಕೊನೆಗೆ ಅದು ಪ್ರಾಣ ಹಾನಿಯನ್ನುಂಟು ಮಾಡಿತು.

ಪ್ರಿಯರೆ ಈ ಯುವಕನಂತೆ ನಮ್ಮ ಸ್ಥಿತಿಯೂ ಕೂಡ ಆ ಯುವಕನು ಆ ಕಂಬಳಿ ಮೂಟೆಗೆ ಆಸೆ ಪಟ್ಟಂತೆ ನಾವೂ ಕೂಡ ಪಾಪದ ಮೇಲೆ ಆಸೆ ಪಟ್ಟು ಅದನ್ನು ಮಾಡಿ ಬಿಡುತ್ತೇವೆ ಕೊನೆಗೆ ಅವನು ಕರಡಿಯ ಬಳಿ ಸಿಕ್ಕಿಕೊಂಡು ತಪ್ಪಿಸಿಕೊಳ್ಳಲಾಗದ ನೀರಿನಲ್ಲಿ ಕೊಚ್ಚಿ ಹೋದಂತೆ ನಾವು ಪಾಪದ ಬಂಧನದಲ್ಲಿ ಸಿಕ್ಕಿಕೊಂಡು ಅದರಿಂದ ತಪ್ಪಿಸಿಕೊಳ್ಳಲಾಗದೆ ಹೋಗುತ್ತೇವೆ.

ಪಾಪವೆಂದರೆ ಏನೆಂದು ಒಂದೇ ಮಾತಿನಲ್ಲಿ ಹೇಳುವುದಾದರೆ ನಾವು ದೇವರಿಗೆ ಇಷ್ಟವಿಲ್ಲದೆ ಮಾಡುವ ಕಾರ್ಯವೆಲ್ಲವೂ ಪಾಪವೇ.

ಕರಡಿಯ ಬಳಿ ಸಿಕ್ಕಿಕೊಂಡ ಯುವಕನು ಮೇಲೆ ಬರಲು ದಾರಿಕಾಣದೆ ಹೋದಂತೆ ಆದರೆ ಇಂದು ಪಾಪದಲ್ಲಿ ಸಿಕ್ಕಿಕೊಂಡಿರುವ ನಮಗೆ ದಾರಿಯುಂಟು ಆ ಯುವಕನನ್ನು ಕಾಪಾಡಲು ಒಬ್ಬರೂ ಮುಂಬರಲಿಲ್ಲ ಆದರೆ ಪಾಪದ ಬಂಧನದಲ್ಲಿ ಸಿಕ್ಕಿಕೊಂಡಿರುವ ಮನುಷ್ಯರನ್ನು ಕಾಪಾಡಲು ಒಬ್ಬರು ಸಿದ್ಧರಾಗಿದ್ದಾರೆ.

ಅವರು ಯಾರು? ಆತನೆ ದೇವರಾದ ಯೇಸುಕ್ರಿಸ್ತನು. ಯೇಸು ಕ್ರಿಸ್ತನು ಪಾಪಿಗಳನ್ನು ರಕ್ಷಿಸುವುದಕ್ಕಾಗಿಯೇ ಈ ಲೋಕಕ್ಕೆ ಬಂದನು ಒಂದು ವೇಳೆ ನೀವು ಪಾಪದಲ್ಲಿ ಸಿಕ್ಕಿಕೊಂಡಿದ್ದಿರಾ ಇಂದೇ ಯೇಸುವಿ ನೊಂದಿಗೆ ತಿರುಗಿಕೊಳ್ಳಿರಿ ಆತನನ್ನು ಕರೆಯಿರಿ ಆತನು ಪಾಪದಿಂದ ಬಿಡಿಸಿದ್ದು ಮಾತ್ರವಲ್ಲದೆ ನಿರಂತರವಾದ ಶಾಂತಿ ಸಮಾಧಾನವನ್ನು ನೀಡುವನು.

*ಪಾಪದ ಸಂಬಳ ಮರಣ (ರೋಮಾ 6:23)*

*ಯೇಸು ಕ್ರಿಸ್ತನ ರಕ್ತವು ಸಕಲ ಪಾಪಗಳನ್ನು ಅಳಿಸಿ ನಮ್ಮನ್ನು ಶುದ್ಧೀಕರಿಸುತ್ತದೆ (ಯೋಹಾನ 1:7)*

ಯೇಸು ಕ್ರಿಸ್ತನ ಬಳಿ ನಿಮ್ಮ ಪಾಪವನ್ನು ಅರಿಕೆಮಾಡಿ ಅದನ್ನು ಬಿಟ್ಟು ಬಿಡಿರಿ ಇಂದೇ ಪಾಪದ ಬಂಧನದಿಂದ ಬಿಡುಗಡೆ ಹೊಂದುವಿರಿ.

ಈ ಪತ್ರಿಕೆಯ ಮೂಲಕ ನೀವು ಯೇಸು ಕ್ರಿಸ್ತನನ್ನು ಅಂಗೀಕರಿಸಿ ಕೊಂಡಿದ್ದೇ ಅದರೆ ಆತನ ಬಗ್ಗೆ ಇನ್ನೂ ತಿಳಿಯಲು ಇಚ್ಛಿಸಿ ಪುಸ್ತಕ ಮತ್ತು ಸಿಡಿಗಳನ್ನು ಪಡೆಯಲು ನಮ್ಮ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಿ.


**VOICE OF JESUS PUBLICATIONS**
P.O.Box:6,Ramanathapuram.623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072. Ph: 9731722977
Email: vojmedia@gmail.com


ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ

VOJ.TRACTS/2013/KANNADA